ಶ್ರೀ ಚಂದ್ರಕಾಂತ ಜಿ. ಬೆಲ್ಲದ್ — ಮಾನ್ಯ ಅಧ್ಯಕ್ಷರೇ, ಧಾರವಾಡ ನಗರ ಒಂದು ಪ್ರತಿಷ್ಠಿತ ನಗರವಾಗಿ ಬೆಳೆದಿದೆ. ಆದ್ದರಿಂದ ಅಲ್ಲಿ ಒಂದು ಬಾಲ ಭವನದ ಅವಶ್ಯಕತೆ ಇದೆ, ಇದನ್ನು ಕಟ್ಟಿಸುವುದಕ್ಕೆ ಜಾಗ ಕೊಡಲು ಅಲ್ಲಿನ ಜಿಲ್ಲಾಧಿಕಾರಿಗಳು ಒಪ್ಪಿದ್ದಾರೆ. ಆದ್ದರಿಂದ ಈ ಕೆಲಸಕ್ಕೆ ಈ ವರ್ಷವೇ ಹಣ ಕೊಟ್ಟು ಇದನ್ನು ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.— ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಅದಕ್ಕೆ ಅಲ್ಲಿನ ಜಿಲ್ಲಾಧಿಕಾರಿಯವರೇ ಚೇರ್‌ಮನ್ ಆಗಿದ್ದಾರೆ. ಆದ್ದರಿಂದ ಅವರು ಈ ವಿಚಾರದಲ್ಲಿ ರಾಜ್ಯಮಟ್ಟದ ಸಮಿತಿಗೆ ಒಂದು ವರದಿಯನ್ನು ಕಳುಹಿಸಿಕೊಟ್ಟರೆ ನಾವು ಅದನ್ನು ಪರಿಶೀಲನೆ ಮಾಡುತ್ತೇವೆ.

Sub.—Un-authoaised cultivation of lands in the atcoment area of tanks.

1722. SRI DHARMAPPA (Sagara).— Will the Minister for Public works. Command area Development and Irrigation be to State.—

a) Whether it has come to the notice of Govt. That the tanks in Malnad area are being unauthorisedly cultivated and tank beds are beaing cultivated unauthorisedly by obstructing flow of water to the tank?

b) Whether it has come to the notice of the Government that whenever excess water is received in the tank, the unauthorised cultivators are breaching the tank bund to save their crops, thus causing hardships to the atchkatdars and loss to the Government property.

c) If so, whether there is no legal provision to evict such unauthorised cultivators and persons who obstruct the flow of water to the tanks? If not, whether the unauthorised cultivators will be evicted by even amending the rules?

SRI H. D. DEVEGOWDA. (Minister for Public Work and Irrigation).—

a) A few instances of unauthorised cultivation of tank beds have come to the notice of Government. But cases of un-authorised cultivation of tank beds by constructing the flow of water to tanks, have not been reported.

b) No.

c) Since the Irrigation Offences are punishable under Section 55 of Karnataka Irrigation Act 1965 there is no necessity for amendment of existing rules in force.

ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರಾದಂಥ ಶ್ರೀ ಧರ್ಮಪ್ಪನವರು ಇತ್ತೀರುವ ಪ್ರಶ್ನೆ ತುಂಬಾ ಮಹತ್ವರವಾದಂಥ ಪ್ರಶ್ನೆ ಯಾಗಿದೆ ಅನೇಕ ಕಡೆಗಳಲ್ಲಿರುವಂತಹ ಕೆರೆ ಆಂಗಳದ ಜಮೀನನ್ನು ಕೆಲವರು ಅಕ್ರಮವಾಗಿ ಸಾಗುವಳಿ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಜೊವ್ಯಾಯಿ ಅವರು ಈ ಸಭೆಯ ಮುಂದೆ ಒಂದು ವಿಧೇಯಕವನ್ನು ಮಂಡನೆ ಮಾಡಿದಾರೆ. ಆ ವಿಧೇಯಕದಲ್ಲಿ ಯಾರಾದರು ಕೆರೆಯ ಆಂಗಳದ ಜಮೀನನ್ನಾಗಲೀ ಇಲ್ಲವೇ ರಿವರ್-ಬೆಡ್‌ನಲ್ಲಿ ಬರುವಂತಹ ಜಮೀನನ್ನಾಗಲೀ ಒತ್ತುವರಿ ಮಾಡಿಕೊಂಡಿದ್ದರೆ, ಅಂತಹವರ

ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದೆ. ಇಂತಹವರಿಗೆ ಕನ್‌ವಿಕ್ಷನ್ ಮತ್ತು ಪೆನಾಲ್ಟಿ ಹೀಗೆ ಎರಡು ರೀತಿಯ ಶಿಕ್ಷೆ ವಿಧಿಸಲು ಆ ವಿಧೇಯಕದಲ್ಲಿ ಅವಕಾಶ ಕಲ್ಪಿಸಲಾಗಿದೆ. ಒಟಿ ನಲ್ಲಿ ಈ ಬಗ್ಗೆ ಸರ್ಕಾರ ತೀವ್ರವಾದಂಥ ಕ್ರಮ ಕೈಕೊಳ್ಳುವ ದಿಕ್ಕಿನಲ್ಲಿ ಆಲೋಚನೆ ಮಾಡುತ್ತಿದೆ.

ಶ್ರೀ ಬಿ. ಧರ್ಮಪ್ಪ.— ನಮ್ಮ ಪಂಲೆನಾಡು ಪ್ರದೇಶದಲ್ಲಿರುವಂತಹ ಕೆರೆಗಳ ಅಂಗಳದಲ್ಲಿ ಅನೇಕ ಜನರು ಬಾಳ ಕಾಲದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಇಂತಹವರನ್ನು ಕೂಡಲೆ ಅಲ್ಲಿಂದ ಹೊರಹಾಕಬೇಕು. ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಕಂದಾಯ ಇಲಾಖೆಯವರ ಕೆಲಸವೆಂದು ನೀರಾವರಿ ಇಲಾಖೆಯವರು ಹೇಳುತ್ತಾರೆ ಕಂದಾಯ ಇಲಾಖೆಯವರನ್ನು ಕೇಳಿದರೆ ಅದು ನೀರಾವರಿ ಇಲಾಖೆಯ ಕೆಲಸವೆಂದು ಹೇಳುತ್ತಾರೆ. ಹೀಗೆ ತಮ್ಮ ಜವಾಬ್ದಾರಿಯನ್ನು ಒಬ್ಬರು ಮತ್ತೊಬ್ಬರ ಮೇಲೆ ಏಹಿಸುವುದು ಸರಿಯಲ್ಲ. ಯಾರಾದರೂ ಕೂಡಲೇ ಪೋಲೀಸರ ಸಹಾಯದಿಂದ ಕ್ರಮ ತೆಗೆದುಕೊಂಡು ಇಂತಹ ಜನರನ್ನು ಅಲ್ಲಿಂದ ಹೊರ ಹಾಕಬೇಕು. ಇಲ್ಲದಿದ್ದರೆ ಎಲ್ಲಿಯೂ ಮುಂದೆ ಕೆರೆಗಳೇ ಇರುವುದಿಲ್ಲ, ಆದ್ದರಿಂದ ಇಂತಹವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ,— ತಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೆ ಕಾರಣ ದಿಂದ ಕನ್‌ವಿಕ್ಷನ್ ಮತ್ತು ಪೆನಾಲ್ಟಿ ಎಂದು ಎರಡು ರೀತಿಯ ಶಿಕ್ಷೆ ವಿಧಿಸಲು ಈ ಸಂಬಂಧದ ತಿದ್ದುಪಡಿ ವಿಧೇಯಕದಲ್ಲಿ ಅಳವಡಿಸಲಾಗಿದೆ. ಈ ವಿಷಯದಲ್ಲಿ ಸರ್ಕಾರ ನಿಜವಾಗಿಯೂ ತೀವ್ರವಾದಂಥ ಕ್ರಮ ಕೈಗೊಳ್ಳುವ ದಿಕ್ಕಿನಲ್ಲಿದೆ.

ಹತ್ತನೆಯ ಪಟ್ಟಿಯ ಪ್ರಶ್ನೆ ೧೦(೩೫೫) ಮಾನ್ಯ ಸದಸ್ಯರು ಹಾಜರಿಲ್ಲ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೋತ್ತರಗಳ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎಚ್.ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ೩೬ನೇ ಪಟ್ಟಿಯ, ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಲಿಖಿತಮೂಲಕ ನೀಡಲಾದ ಪ್ರಶ್ನೋತ್ತರಗಳ ಪಟ್ಟಿ

Selected Villages under Ganga-Kalyana Scheme in Aland Taluk

1556. SRI SHARANABASAPPA MALI PAITL.— Will the Minister for Public Works and Irrigation pleased to state ?

a) Which are the villages selected for the implementation Ganga Kalyana Schemes in land Taluk (Category wise details are to be furnished).

b) Which are the agencies entrusted with the execution of these works.

c) What is the expenditure incurred so far for these Schemes

SRI H. D. DEVE GOWDA (Minister for Public Works and Irrigation).—

a) Category – I.

1. Jeeralli 2) Yallasangi 3) Madyala 4) Hadalagi
5. Bennisirur 6) Jalaki (K) 7) Annur

Category – II. No sites are identified so for.

b) The agencies entrusted with the execution of these works are ;

1.	Jeeralli	– Mehaboob Ansari
2.	Yallasangi	– Thippaiah S/o Siddaiah
3.	Madyala	– Jaganath Patil
4.	Hadalagi	– Immamsab S/o Mahaboob Sab Donge
5.	Bennisirur	– Basvaraj S/o Siddappa
6.	Jalaki (K)	– Not yet started
7.	Annur	– Not yet started

c) Rs. 3,56,210-00

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ವಿದ್ಯಾರ್ಥಿ ನಿಲಯಗಳ ಸ್ಥಾಪನೆ

೧೭೬೮. ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ) —ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನ ಹೋಬಳಿ ಕೇಂದ್ರಗಳಾದ ನಂದಿ, ಮಂಡಿಕಲ್ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು ಹಾಗೂ ಪೇರ್‌ಸಂದ್ರದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಕೋರಿ ಸರ್ಕಾರಕ್ಕೆ ಮನವಿಗಳು ಏನಾದರೂ ಬಂದಿವೆಯೇ ?

ಆ) ಹಾಗಿದ್ದಲ್ಲಿ, ಸರಕಾರದವರು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಮಂಡಿಕಲ್ ಗ್ರಾಮಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಮನವಿ ಬಂದಿದೆ ಪೇರ್‌ಸಂದ್ರಕ್ಕೆ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಮನವಿ ಬಂದಿಲ್ಲ.

ಆ) ೧೯೮೬-೮೭ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಅಂಗನವಾಡಿ ಯೋಜನೆಯ ಬಗ್ಗೆ

೧೮೦೧. ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿದ್ದು ಬರಗಾಲಕ್ಕೆ ಶಾಶ್ವತವಾಗಿ ತುತ್ತಾಗಿ ಜನಗಳು ತೊಂದರೆಗಳಿಗಾಗಿರುವುದರಿಂದ ಅಲ್ಲಿ ಅಂಗನವಾಡಿ ಯೋಜನೆಯು ಅವಶ್ಯಕತೆಯಿದೆಯೆಂದು ಯೋಜನಾ ಪಟ್ಟಿಯಲ್ಲಿ ಸೇರಿದಾಗ್ಯೂ ಕಾರ್ಯರೂಪಕ್ಕೆ ತರಲು ವಿಳಂಬವಾಗಲು ಕಾರಣವೇನು ?

ಆ) ಹಾಗಾದರೆ ಬರುವ ಶೈಕ್ಷಣಿಕ ವರ್ಷಗಳಲ್ಲಾದರೂ ಪ್ರಾರಂಭಿಸುವ ಯೋಜನೆ ಸರ್ಕಾರದವರಿಗಿದೆಯೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸಮಗ್ರ ಬಾಲವಿಕಾಸ ಯೋಜನೆಯು ಶಿರಾ ತಾಲ್ಲೂಕಿನಲ್ಲಿ ಮಂಜೂರಾಗದೆ ಇರುವ ಕಾರಣ ಅಂಗನವಾಡಿಗಳನ್ನು ತೆರೆದಿರುವುದಿಲ್ಲ.

ಆ) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮಗ್ರ ಬಾಲವಿಕಾಸ ಯೋಜನೆಯನ್ನು ಶಿರಾ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.